ಬರೆದುಕೊಂಡಿರುತ್ತಾಳೆ. ನಾನು ನಿರಪರಾಧಿ ನನಗೆ ಏನೂ ಗೊತ್ತಿಲ್ಲವೆಂದು ಹೇಳಿ ಬರೆದು ಬಾವಿಗೆ ಹಾರುತ್ತಾಳೆ. ಬಾವಿಗೆ ಹಾರಿ ಪೋಲೀಸ್‌ನವರು ಅದನ್ನು ಎತ್ತಿದಾಗ ನಾನು ಅಲ್ಲೇ ಇದ್ದೆ. ಪೋಲೀಸ್ ನವರು ಪೋಟೋಗ್ರಫಿ ತೆಗೆದಿದ್ದಾರೆ. ನಾನೂ ಸಹ ಅದನ್ನು ನೋಡಿದ್ದೇನೆ. ಆದರೆ ನಾನು ನಿರಪರಾಧಿ ನನಗೇನೂ ಗೊತ್ತಿಲ್ಲ ಎನ್ನುವ ವಿಚಾರವನ್ನು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡರೂ ಸಹ ಇದು ಆಗಿ ಒಂದು ವರ್ಷವಾದರೂ ಸಹ ಪರಿಹಾರ ಕೊಡಲಿಕ್ಕೆ ನಮ್ಮ ವ್ಯವಸ್ಥೆಯಲ್ಲಿ ಆಗಿಲ್ಲ. ಅಂದಿನ ಕಂದಾಯ ಸಚಿವರಾದ ಜಿಗಜಿಣಗಿಯವರನ್ನು ಭೇಟಿಯಾಗಿದ್ದೆ. ಅನಂತರ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿಯಾಗಿದ್ದೆ. ಆದರೆ ಇಲ್ಲಿಯತನಕ ಪರಿಹಾರ ಕೊಡಲಿಲ್ಲ. ಆದ್ದರಿಂದ ನಾನು ಹೇಳುವುದು ತಮಗೆ ಅರ್ಥವಾಗಿದ್ದರೆ ಅವರಿಗೆ ಪರಿಹಾರ ಕೊಡಬೇಕೆಂದು ತಮ್ಮ ಮುಖಾಂತರ ನನ್ನ ವಿನಂತಿ.

ಶ್ರೀ ಆರ್. ರೋಷನ್ ಬೇಗ್ (ಗೃಹ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಏನು ಹೇಳುತ್ತಿದ್ದಾರೆ, ಪೋಲೀಸ್ ದೌರ್ಜನ್ಯದಿಂದ ಹರಿಜನ ಹುಡುಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ನಮ್ಮ ಪೋಲೀಸ್ ವರದಿಯ ಪ್ರಕಾರ ಅಂತಹದ್ದು ಯಾವುದೂ ಇಲ್ಲ. ಪೋಲೀಸ್ ಠಾಣೆಗೆ 6.30 ಗಂಟೆಗೆ ತಂದೆತಾಯಿ ಅವರನ್ನೆಲ್ಲ ಬಂದು ಕರೆದುಕೊಂಡು ಹೋಗುತ್ತಾರೆ. ಅಲ್ಲಿಂದ ಮನೆಗೆ ಹೋದಮೇಲೆ ಮುಂದಿನ ದಿನ 8ನೇ ತಾರೀಖು ಸುಮಾರು 9.30 ಗಂಟೆಗೆ ಶವ ಸಿಗುತ್ತದೆ. ಇದು ನಿಜವಾಗಿ ದೌರ್ಜನ್ಯ ಆಗಿದೆಯೋ ಇಲ್ಲವೋ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಬೇಕಾದರೆ ನಾನು ಹೊಸದಾಗಿ ಐಜಿಪಿ ಕಡೆಯಿಂದ ಎನ್ ಕ್ವಾಯರಿ ಮಾಡಿಸುತ್ತೇನೆ. ನಿಜವಾಗಿಯೂ ಏನಾದರೂ ಆಗಿದ್ದರೆ ನಾನು ಪರಿಹಾರ ಕೊಡಿಸುತ್ತೇನೆ.

ಅರ್ಕಾವತಿ ಜಲಾಶಯದ ಕಾಮಗಾರಿ ಬಗ್ಗೆ

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಅರ್ಕಾವತಿ ಜಲಾಶಯ ಯೋಜನೆ 1984ರಲ್ಲಿ ಶುರುವಾಗಿ ಶೇಕಡ 90ರಷ್ಟು ಕೆಲಸ ಈಗಾಗಲೇ ಮುಗಿದಿದೆ. ಆದರೆ ಕಳೆದ ನಾಲ್ಕು ತಿಂಗಳಿನಿಂದ ಅರ್ಕಾವತಿ ಜಲಾಶಯದ ಕೆಲಸ ನಿಂತಿದೆ. ಮಾನ್ಯ ನಾಗೇಗೌಡರು ನೀರಾವರಿ ಸಚಿವರಾದಮೇಲೆ ಕಾವೇರಿ ಯೋಜನೆಯಲ್ಲಿ ಬರುವಂತಹ ಎಲ್ಲಾ ಯೋಜನೆಗಳ ಬಗ್ಗೆ ಗಮನವನ್ನು ಬಿಟ್ಟಿದ್ದಾರೆ. ಸರಿಯಾಗಿ ಹಣವನ್ನು ಕೊಡುತ್ತಿಲ್ಲ. ಅದು ಏನಾಗಿದೆ ಎನ್ನುವ ಬಗ್ಗೆ ಅದರ ಕಡೆಗೆ ಲಕ್ಷ್ಯ ಕೂಡ ಇಲ್ಲ. ನಾಲ್ಕು ತಿಂಗಳಿಂದ ಕೆಲಸ ನಿಂತು ಹೋಗಿದೆ. ಇವತ್ತಿನವರೆಗೆ ಸರ್ಕಾರ ಏನು ಮಾಡಬೇಕೆಂದು ಕ್ರಮ ಕೈಗೊಂಡಿಲ್ಲ. ಅಲ್ಲಿಯ ರೈತರು ಪರಿಹಾರಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ಅಲ್ಲಿಯ ರೈತರಿಗೆ 6 ಸಾವಿರ 7 ಸಾವಿರ 10 ಸಾವಿರ ಹೆಚ್ಚು ಅಂದರೆ 20 ಸಾವಿರ ಪರಿಹಾರ ಕೊಡುತ್ತಿದ್ದಾರೆ. ಅದೇ ಬಾಗಲಕೋಟೆಯಲ್ಲಿ ಯುಕೆಪಿ ಯೋಜನೆಯಲ್ಲಿ ಜಮೀನು ಮನೆ ಕಳೆದುಕೊಂಡವರಿಗೆ 1 ಲಕ್ಷದ 14 ಸಾವಿರ ಪರಿಹಾರವನ್ನು ಸರ್ಕಾರ ನಿಗದಿ ಮಾಡಿದೆ. ಬೆಂಗಳೂರಿನಿಂದ 60 ಕಿಲೋಮೀಟರ್ ದೂರವಿರುವಂತಹ ಹಳ್ಳಿಗಳಿಗೆ ಬರೀ 20 ಸಾವಿರ ಪರಿಹಾರ. ಬಾಗಲಕೋಟೆಗೆ 1 ಲಕ್ಷದ 14 ಸಾವಿರ ಪರಿಹಾರ ಹೀಗೆ ತಾರತಮ್ಯ ಏಕೆ ? ಅದರ ವಿರುದ್ಧವಾಗಿ ಜನ ಪ್ರತಿಭಟನೆ ಮಾಡಿ ಕೆಲಸ ನಿಲ್ಲಿಸಿದ್ದಾರೆ. ಅದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಅದರ ಬಗ್ಗೆ ಮಾನ್ಯ

ಮಂತ್ರಿಗಳು ಹೇಳಿಕೆಯನ್ನು ಕೊಡಬೇಕು. ಬಹುಶಃ ಅವರು ಕಾವೇರಿ ಯೋಜನೆಗಳ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿರುವುದರಿಂದ ನಿಜವಾಗಲೂ ರಾಜೀನಾಮೆ ಕೊಡುವುದು ಉತ್ತಮವೆಂದು ನಾನಂತೂ ತಿಳಿದುಕೊಂಡಿದ್ದೇನೆ. ಏಕೆಂದರೆ ಕಾವೇರಿಯ ಯೋಜನೆಗಳ ಬಗ್ಗೆ ಸ್ವಲ್ಪ ಗಮನವನ್ನು ಮಾನ್ಯ ಮಂತ್ರಿಗಳು ಹರಿಸುತ್ತಿಲ್ಲ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಖಾತೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಒಂದಂಶ ಏನೆಂದರೆ 1984ರಲ್ಲಿ ಅರ್ಕಾವತಿ ಯೋಜನೆಯಿಂದ 6282 ಹೆಕ್ಟೇರ್ ನೀರು ಕೊಡಬೇಕೆಂದು ಮಾಡಿದ್ದರು. 1984ರಿಂದ ಇದುವರೆಗೆ ಸುಮಾರು 45 ಕೋಟಿ ರೂಪಾಯಿ ಹಣವನ್ನು ನಾವು ವೆಚ್ಚ ಮಾಡಿದ್ದೇವೆ. ಮಾನ್ಯ ಶಿವಕುಮಾರ್‌ರವರ ಕ್ಷೇತ್ರದಲ್ಲಿಯೇ ಇದು ಮೇಜರ್ ಬರುತ್ತದೆ. ಡ್ಯಾಮ್ ಪೋರ್ಷನ್ ಆಲ್ ಮೋಸ್ಟ್ ಆಲ್ ಮುಗಿಯುತ್ತಾ ಬಂದಿದೆ. ಡ್ಯಾಮ್ ಪೋರ್ಷನ್ ಕೆಲಸ ಯಾರ ಕಾಲದಲ್ಲಿ ಹೆಚ್ಚಾಯಿತು ಎನ್ನುವುದನ್ನು ಶಿವಕುಮಾರ್‌ರವರೇ ಹೇಳಿಬಿಟ್ಟರೆ ಸಾಕು ನಮಗೆ, ಮೂರು ವರ್ಷದಲ್ಲಿ ಟೋಟಲ್ ಕಾಂಕ್ರೀಟ್ ವರ್ಕ್ ಎಷ್ಟಾಗಿದೆ? ನಾನು ಅದರ ಬಗ್ಗೆ ತಕರಾರು ಮಾಡುವುದಕ್ಕೆ ಹೋಗುವುದಿಲ್ಲ. ಅವರ ಆಸೆ ಏನೆಂದರೆ ಮೂರು ಹಳ್ಳಿಗಳು ಮುಳುಗಡೆಯಾಗುತ್ತವೆ. ಮಾರ್ಚಿ 1999ಕ್ಕೆ ಮೂರು ಹಳ್ಳಿಗಳು ಮುಳುಗಡೆಯಾಗುತ್ತವೆ. ಅವುಗಳನ್ನು ಸ್ಥಳಾಂತರ ಮಾಡಬೇಕು. ಆ ಹಳ್ಳಿಗಳವರು ಏನು ಹೇಳುತ್ತಿದ್ದಾರೆಂದರೆ ನಮಗ ಫಾರೆಸ್ಟ್ ಲ್ಯಾಂಡ್ ಕೊಡಿಸಿಯೆಂದು ಕೇಳುತ್ತಿದ್ದಾರೆ. ಎರಡನೆಯದು ಬಾಗಲಕೋಟೆಯಲ್ಲಿ ಕೊಡುವ ರೀತಿಯಲ್ಲಿಯೇ ನಮಗೂ ಪರಿಹಾರವನ್ನು ಕೊಡಿಯೆಂದು ಕೇಳುತ್ತಿದ್ದಾರೆ. 1999 ಮಾರ್ಚಿಯೊಳಗೆ ಸ್ಥಳಾಂತರ ಮಾಡುವುದರೊಳಗೆ ಭೂಮಿಯ ಪರಿಹಾರವನ್ನು 28 ಸಾವಿರ 35 ಸಾವಿರ ಕೊಡುತ್ತಿದ್ದೇವೆ. ಎರಡೂವರೆ ಕೋಟಿ ರೂಪಾಯಿಗಳನ್ನು ಮೂರು ಹಳ್ಳಿಗಳಿಗೆ ಎಸ್ಟಿಮೇಟ್ ಮಾಡಿದ್ದಾರೆ. ಮಾನ್ಯ ಶಿವಕುಮಾರ್‌ರವರು ಹೇಳುವ ರೀತಿಯಲ್ಲಿ ಅವರು ಜಾಸ್ತಿಯ ಹಣವನ್ನು ಕೇಳುತ್ತಿರುವ ರೀತಿಯಲ್ಲಿ ಮಾನ್ಯ ಸಿಂಧ್ಯಾರವರು ಎರಡು ಕಮಿಟಿಗಳನ್ನು ಮಾಡಿದ್ದಾರೆ. ಆ ಕಮಿಟಿಯವರು ಏನು ಸಲಹೆ ಮಾಡುತ್ತಾರೆ ನೋಡೋಣ. ರಿಯಾಬಿಲಿಟೇಷನ್ ಕಮಿಟಿಯ ಅಧ್ಯಕ್ಷರಾಗಿ ವಿಭಾಗಾಧಿಕಾರಿಗಳು ಇದ್ದಾರೆ. ಆ ರಿಯಾಬಿಲಿಟೇಷನ್ ಕಮಿಟಿಯೊಳಗೆ ಇದನ್ನೆಲ್ಲ ಎಕ್ಸಾಮಿನ್ ಮಾಡುವುದಕ್ಕೆ ಹೇಳುತ್ತೇವೆ. ಫಾರೆಸ್ಟ್ ಲ್ಯಾಂಡ್ ಕೊಡುವುದಕ್ಕೆ ನಮಗೆ ಕೇಂದ್ರ ಸರ್ಕಾರದವರು ಬಿಟ್ಟುಕೊಡುವುದಿಲ್ಲವೆನ್ನುವ ವಿಚಾರ ತಮಗೆ ಗೊತ್ತಿದೆ. ನಾವು ರೈತರಿಗೆ ಜಮೀನು ಅವರ ಅನುಮತಿ ಇಲ್ಲದೆ ಕೊಡುವುದಕ್ಕಾಗುವುದಿಲ್ಲ. ಮೂರು ಹಳ್ಳಿಗಳಿಗೆ ಪುನರ್ ವ್ಯವಸ್ಥೆ ಮಾಡುವುದಕ್ಕೆ ಕುಡಿಯುವ ನೀರು ರಸ್ತೆ, ಮನೆ ಕಟ್ಟುವುದಕ್ಕೆ ಸೈಟು ಕೊಡುವುದು, ಅವರ ಜಮೀನಿಗೆ ಪರಿಹಾರ ಕೊಡುವುದಕ್ಕೆ ಎರಡೂವರೆ ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಿದ್ದೇವೆ. ಅವರಿಗೆ ಹೆಚ್ಚು ಹಣವನ್ನು ಕೊಡಿಸಬೇಕೆನ್ನುವ ಭಾವನೆ ನಿಮಗೆ ಇದ್ದರೆ ನಾವು ಅದನ್ನು ಕೊಡಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ರೈತರು ನಾಲ್ಕು ತಿಂಗಳಿನಿಂದ ಏನು ಮುಷ್ಕರ ಮಾಡುತ್ತಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಲಿಕ್ಕೆ ಹೇಳಿ. ಪರಿಹಾರದ ಹಣವನ್ನು ಹೆಚ್ಚಿಸೋಣ. ಪರಿಹಾರದ ಜೊತೆಗೆ ನನ್ನ ರಾಜೀನಾಮೆಯನ್ನು ಕಳುಹಿಸುತ್ತೇನೆ. ಅದನ್ನು ತೆಗೆದುಕೊಂಡು ವಾಪಸ್ಸು ಕೊಟ್ಟು ಕಳುಹಿಸಲಿ.